
ಪಿ.ಎನ್. ಶ್ರೀವತ್ಸ, ಬೆಂಗಳೂರು
ನಗರಗಳಲ್ಲಿ ನಾವು ಎದ್ದಮೇಲೇ ಕೋಳಿ ಕೂಗುತ್ತಿರುವುದಕ್ಕೆ ಕಾರಣ?



ತಡರಾತ್ರಿಯವರೆಗೆ ಟ್ರಾಫಿಕ್ ಇದ್ದು ಕೋಳಿ ನಿದ್ರಿಸುವುದೇ ಬೆಳಗಿನ ಜಾವವಂತೆ.

ಪಿ.ಜೆ. ರಾಘವೇಂದ್ರ, ಮೈಸೂರು
ಸುಗ್ರೀವಾಜ್ಞೆಯನ್ನು ಹೊರಡಿಸುವವರನ್ನು ಸುಗ್ರೀವ ಎನ್ನಬಹುದೆ?
ಆ ಆಜ್ಞೆಯತ್ತಲೇ ವಾಲುವುದರಿಂದ ವಾಲಿ ಎಂದೂ ಕರೆಯಬಹುದು!

ಬಿ.ಆರ್. ಉಷಾ, ಕೆನಡಾ
ಕೆನಡಾದಲ್ಲಿ ಕನ್ನಡದವರೆಲ್ಲಾ ಒಟ್ಟಾಗಿರುತ್ತಾರೆ. ಆದರೆ ಕರ್ನಾಟಕದಲ್ಲಿಲ್ಲ. ಏಕೆ?
'ಇನ್ನೊಬ್ಬರ ಮುಂದೆ ನಾವು 105; ನಮ್ಮನಮ್ಮಲ್ಲೇ ಇದ್ದಾಗ ನಾವು 5' ಎಂಬ ಧರ್ಮರಾಯ ನಿಯಮ.

ಆರ್. ಮಯೂರಿ, ಕೆನಡಾ
ಎರಡು ಜಡೆ ಒಟ್ಟಾಗಿರಲ್ಲ. ಎರಡು ಬಾಬ್ ಕಟ್?



ಕಟ್ ಆದ ಕೇಶವಂತೂ ಒಟ್ಟಿಗಿರುತ್ತದೆ ಪಾರ್ಲರ್‌ನ ಬಿನ್‌ನಲ್ಲಿ.

ಮಲ್ಲಿಕಾರ್ಜುನ, ಸುರಧೇನುಪುರ
ದುಡ್ಡೇ ದೊಡ್ಡಪ್ಪ. ದುಡಿಮೆ?
ದೊಡ್ಡಪ್ಪನ ಅಪ್ಪ.

ಎಲ್.ಐ.ಸಿ. ವಿಜೇಂದ್ರ, ಮೈಸೂರು
ಇಲ್ಲೊಬ್ಬನು ಕೋವಿಡ್ ಸಮಯದಲ್ಲಿ ದೇವರು ಎಲ್ಲಿಗೆ ಹೋಗಿದ್ದ ಎನ್ನುತ್ತಿದ್ದಾನಲ್ಲ?
ಭೂದೇವಿಯ ಕೋರಿಕೆಯ ಮೇರೆಗೆ 'ಲೋಡ್ ಶೆಡ್ಡಿಂಗ್' ಮಾಡುತ್ತಿದ್ದನಂತೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
'ಸಾವಿನ ದವಡೆಯಿಂದ ಪಾರಾದರು'; ಸಾವಿಗೂ ದವಡೆಗೂ ಏನೀ ಅನುಬಂಧ?
ಯಮಲೋಕದ ದ್ವಾರವೇ ಬಾಯಿ; ಪಾಶವೇ ದವಡೆ; ಕಿಂಕರನೇ ನಾಲಿಗೆ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಅಪಘಾತಕ್ಕೂ, ದುರಂತಕ್ಕೂ ಇರುವ ವ್ಯತ್ಯಾಸವೇನು?
ಯಾರದೋ ವಾಹನಗಳು ಡಿಕ್ಕಿ ಹೊಡೆದರೆ ಅಪಘಾತ; ನಮ್ಮದೇ ಆದರೆ ದುರಂತ.

ಅನಸೂಯ ಟಿ., ಕೇದಿಗೆಮನೆ
ಎಲ್ಲವನ್ನೂ ತ್ಯಾಗ ಮಾಡಿದವನೇ ಶ್ರೇಷ್ಠನೆಂದಾದರೆ ಭೋಗಕ್ಕಾಗೇಕಿಷ್ಟು ಹೋರಾಟ?
ತ್ಯಾಗ ವಿಮೆ; ಭೋಗ ಬೋನಸ್; ಬೋನಸ್‌ಗಿರುವ ಆಕರ್ಷಣೆ ವಿಮೆಗಿಲ್ಲ.

ಲಕ್ಷ್ಮಣ್ ಗೂರ್ಲಕಟ್ಟೆ, ಮೈಸೂರು
ಮಂಗಳವಾರ ಆದರೂ ಮಂಗಳ ಕಾರ್ಯಗಳಿಗೆ ಮಂಗಳವಲ್ಲ! ಏಕೆ?
ಬುಧರೂ, ಗುರುಗಳೂ ಸೇರಿ ಹಾಗೆ ತೀರ್ಮಾನಿಸಿರುವುದರಿಂದ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನೆ ಕಟ್ಟಲು ಹಣ ಬೇಕು. ಮನಸ್ಸು ಕಟ್ಟಲು?
ಸ್ಥೈರಣೆ.

ಚಿದಂಬರ, ಭೀಮನಕಟ್ಟೆ
ಎಲ್ಲ ಪಕ್ಷಗಳೂ, ರಾಜಕಾರಣಿಗಳೂ ಕೊಳೆತ ತೆಂಗಿನ ಚೂರುಗಳಂತಿರುವಾಗ ಒಳ್ಳೆಯದನ್ನು ಆರಿಸುವುದೆಂತು?
ಯಾವ ಚೂರು ನಮ್ಮ ಕೈಗೆ ಚಿಕ್ಕ ಕರಟ ಕೊಡುವುದೋ ಅದೇ ಉತ್ತಮ.

ಅ. ಮೃತ್ಯುಂಜಯ, ಪಾಂಡವಪುರ
ನಾನು ಎಂಬುದನ್ನು ಯಾರು ಬಿಟ್ಟಿದ್ದಾರೆ?
ತಮ್ಮನ್ನು ತಾವೇ 'ನಾವು' ಎಂದು ಕರೆದುಕೊಳ್ಳುವ ಮಠಾಧೀಶರು.

ಸಿ.ಕೆ. ಗಣಪ್ಪನವರ, ಮುಂಡರಗಿ
ಒಂದೊಮ್ಮೆ ನೀವೇ ಓದುಗರಿಗೆ ಪ್ರಶ್ನೆ ಕೇಳುವಂತಿದ್ದರೆ ಯಾವ ಪ್ರಶ್ನೆ ಕೇಳುತ್ತೀರಿ?
ನಿಮ್ಮ ಮುಂದಿನ ಪ್ರಶ್ನೆ ಯಾವುದು?


**ಬಹುಮಾನಿತ ಪ್ರಶ್ನೆ**

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಮನುಷ್ಯನಿಗೆ ಎರಡು ಕೈಗಳಿದ್ದರೂ 'ಅವನನ್ನು ಒಂದು ಕೈ ನೋಡ್ಕೊಳ್ತೀನಿ' ಎನ್ನುವುದೇಕೆ?
ಅದು ಕತ್ತಿ – ಗುರಾಣಿ ನಿಯಮ – ಆತ್ಮರಕ್ಷಣೆಗೊಂದು, ಆಕ್ರಮಣಕ್ಕೊಂದು.

ಬಿ. ನಾಗರಾಜು, ಬೆಂಗಳೂರು
ರಾಜಕಾರಣ ಫಲಾಪೇಕ್ಷೆ ಇಲ್ಲದ ಸೇವೆಯೋ, ಫಲವತ್ತಾದ ಉದ್ಯೋಗವೋ?
ಉದ್ಯೋಗವೇ – ಲೂಟಿ, ದರೋಡೆಯನ್ನು ಉದ್ಯೋಗ ಎನ್ನಬಹುದಾದರೆ!

ವಸುಧಾ ಜೈಶಂಕರ್, ಬೆಂಗಳೂರು
ಸತ್ತು ಹುಟ್ಟಿದವರಿಗೆ ಮಾತ್ರ ಜೀವನದ ಅರ್ಥ ತಿಳಿಯಲು ಸಾಧ್ಯ. ಏನಂತೀರಾ?
ಸತ್ತವರು ಬಿಟ್ಟುಹೋದ ಸತ್ವಂ ಅರಿಯುವವರಿಗೂ ಸಾಧ್ಯ.

ಪೆಮ್ಮಳ್ಳಿ ಚಿಕ್ಕಣ್ಣ, ಪಾವಗಡ
ಮಡದಿ ವಿಪರೀತ ಮುನಿಸಿಕೊಂಡಿದ್ದಾಳೆ. ಏನು ಮಾಡಲಿ?



ವಿರಮಿಸುವಂತೆ ರಮಿಸಿ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ
ಗಜಕೇಸರಿ ಯೋಗ ಎಂದರೇನು ಗುರುಗಳೆ?
ಆನೆಯಂತಹವರಿಗಷ್ಟೇ ಸೂಕ್ತವಾದ (ಗಜಕೇ ಸರಿ) ಯೋಗವಿದ್ದೀತು.

ವಂದನಾ ವಿನಯ್, ಬೂಕನಕೆರೆ
ಭಯ ಬೇಡ, ಎಚ್ಚರಿಕೆಯಿಂದ ಇರಬೇಕು ಎಂದರೆ ಹೇಗೆ?
ವಿದ್ಯಾನಗರದ ವಿವೇಕಾನಂದ ರಸ್ತೆಯಲ್ಲಿ ವಿವೇಚನೆಯ ಮನೆ ಮಾಡಿಕೊಳ್ಳಿ.

■ ರಾಮ್